1 NO POVERTY

2 ZERO HUNGER

4 QUALITY EDUCATION

5 GENDER EQUALITY

6 CLEAN WATER AND SANITATION

9 INDUSTRY, INNOVATION AND INFRASTRUCTURE

11 SUSTAINABLE CITIES AND COMMUNITIES

Self-sufficient Infrastructure village

ಸ್ವಾವಲಂಬಿ
ಮೂಲಸೌಕರ್ಯವಿರುವ ಗ್ರಾಮ













# ಗ್ರಾಮ ಪಂಚಾಯಿತಿ ಮಟ್ಟದ ಮೂಲಸೌಕರ್ಯಗಳು

- ಗ್ರಾಮ ಪಂಚಾಯಿತಿ ಭವನ / ವಸತಿ / ವೈಯಕ್ತಿಕ ಮನೆಗಳಿಗೆ ಶೌಚಾಲಯ / ಸಾರ್ವಜನಿಕ ಶೌಚಾಲಯಗಳು
- ಸಮುದಾಯ ಭವನಗಳು / ಆರೋಗ್ಯ ಕೇಂದ್ರ ಮತ್ತು ಶಾಲಾ ಕಟ್ಟಡಗಳು / ಗೋಡೌನ್‌ಗಳು ನೀರು ಮತ್ತು ನೈರ್ಮಲ್ಯ ಜಾಲಗಳು
- ರಸ್ತೆಗಳು / ಸೇತುವೆಗಳು / ಚರಂಡಿಗಳು
- ಬೀದಿ ದೀಪಗಳು
- ಯಂತ್ರೋಪಕರಣಗಳು ಮತ್ತು ಉಪಕರಣಗಳು
- ಆಟದ ಮೈದಾನಗಳು / ಉದ್ಯಾನವನಗಳು / ಕಣಗಳು
- ಕಂಪ್ಯೂಟರ್ ಮತ್ತು ಇಂಟರ್ನೆಟ್ ಇತ್ಯಾದಿ









**ದೃಷ್ಟಿಕೋನ: ಎಲ್ಲರಿಗೂ ಸಾಕಷ್ಟು, ಸುರಕ್ಷಿತ ಮತ್ತು ಕೈಗೆಟುಕುವ ವಸತಿ ಹಾಗೂ ಮೂಲಭೂತ ಸೇವೆಗಳನ್ನು ಖಾತರಿಪಡಿಸಿಕೊಳ್ಳುವುದರ ಮೂಲಕ ಸ್ವಾವಲಂಬಿ ಮೂಲಸೌಕರ್ಯವನ್ನು ಸಾಧಿಸುವುದು**



## ಸ್ಥಳೀಯ ಗುರಿಗಳು :

1. ಗುಣಮಟ್ಟದ ಮೂಲಸೌಕರ್ಯಗಳ ಸ್ಥಾಪನೆಯನ್ನು ಖಾತರಿಪಡಿಸಿಕೊಳ್ಳುವುದು- ಗ್ರಾಮ ಪಂಚಾಯಿತಿ ಭವನ, ಅಂಗನವಾಡಿ ಕೇಂದ್ರ, ಶಾಲೆಗಳು, ಆರೋಗ್ಯ ಕೇಂದ್ರ, ಸಾಮಾನ್ಯ ಸೇವಾ ಕೇಂದ್ರಗಳು(CSC), ಟ್ಯಾಪ್ ನೀರಿನೊಂದಿಗೆ ಉಪಯುಕ್ತ ಪ್ರತ್ಯೇಕ ಶೌಚಾಲಯಗಳು.

2. ಎಲ್ಲಾ ಹವಾಮಾನ/ಕಾಲದ ಸಂಪರ್ಕ ರಸ್ತೆಗಳು, ಸೌರವಿದ್ಯುತ್ ಬೀದಿ ದೀಪಗಳು ಮತ್ತು ಸಮುದಾಯ ಸೌರ ಮರ ಹಾಗೂ ಎಲ್ಲರಿಗೂ ಪಕ್ಕಾ ಮನೆಯನ್ನು ಖಾತರಿಪಡಿಸಿಕೊಳ್ಳುವುದು.

3. ಎಲ್ಲಾ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಖಾತರಿಪಡಿಸಿಕೊಳ್ಳುವುದು.

4. ಸರಿಯಾದ ರೀತಿಯಲ್ಲಿ ಮುಚ್ಚಿರುವ ಒಳಚರಂಡಿ ವ್ಯವಸ್ಥೆಯನ್ನು ಖಾತರಿಪಡಿಸಿಕೊಳ್ಳುವುದು.



# ಗ್ರಾಮ ಪಂಚಾಯಿತಿಯ ಕ್ರಮಗಳು

- ಭಾಗವಹಿಸುವ ಸಮೀಕ್ಷೆಗಳ ಮೂಲಕ ಎಲ್ಲಾ ವಲಯಗಳಲ್ಲಿ ಅಗತ್ಯತೆಗಳನ್ನು ಗುರುತಿಸುವುದು.
- ನೀರು, ನೈರ್ಮಲ್ಯ ಮತ್ತು ಸ್ವಚ್ಛತೆ (WASH) ಸೇವೆಗಳಿಗೆ ಸೂಕ್ತವಾದ ತಂತ್ರಜ್ಞಾನದ ಆಯ್ಕೆಯನ್ನು ಆಯ್ಕೆಮಾಡುವುದು.
- ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಬಳಕೆಗೆ ಯೋಗ್ಯವಾದ ಶೌಚಾಲಯಗಳನ್ನು ಖಾತರಿಪಡಿಸಿಕೊಳ್ಳುವುದು.
- ಸಾರ್ವಜನಿಕ ಸ್ಥಳಗಳಲ್ಲಿನ ಶೌಚಾಲಯಗಳ ನಿರ್ವಹಣೆಯನ್ನು ಖಾತರಿಪಡಿಸುವುದು.
- ಮೂಲಸೌಕರ್ಯಗಳನ್ನು ನಿರ್ಮಿಸಲು ಸೂಕ್ತವಾದ ಯೋಜನೆಗಳನ್ನು ಗುರುತಿಸುವುದು.
- ನಿರ್ಮಿಸಲಾದ ಆಸ್ತಿಗಳ ನಿರ್ವಹಣೆಗಾಗಿ ಜನರ ಸಮಿತಿಗಳನ್ನು ರಚಿಸುವುದು.
- ಸಾರ್ವಜನಿಕ ಸ್ವತ್ತುಗಳ ನಿರ್ವಹಣೆಯ ಕುರಿತು ಎಲ್ಲಾ ಕುಟುಂಬಗಳಿಗೆ ಅರಿವು ನೀಡುವುದು.

# ಗ್ರಾಮ ಪಂಚಾಯಿತಿಗಳ ಪಾತ್ರ

- ಸಹಭಾಗಿತ್ವದ ಸಮೀಕ್ಷೆಯಿಂದ ನೀರಿನ ಅಗತ್ಯತೆಗಳು, ಮೂಲಗಳು, ಯೋಜನೆಗಳು, ಘನ ಮತ್ತು ದ್ರವ ತ್ಯಾಜ್ಯ ಉತ್ಪತ್ತಿಯನ್ನು ಗುರುತಿಸುವುದು - (ಜೈವಿಕ ಮತ್ತು ಜೈವಿಕ ವಿಘಟನೀಯವಲ್ಲದ) ಹಾಗೂ ನೀರು ಸರಬರಾಜು, ನೈರ್ಮಲ್ಯ, ಪರಿಸರ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಸೌಲಭ್ಯಗಳ ಅಗತ್ಯತೆಗಳನ್ನು ಕಂಡುಕೊಳ್ಳುವುದು.
- ಶಾಲೆಗಳಲ್ಲಿ (ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ) ಮತ್ತು ಅಂಗನವಾಡಿಗಳಲ್ಲಿ ಸಮರ್ಪಕ, ಬಳಕೆಗೆ ಯೋಗ್ಯವಾದ ಸ್ವಚ್ಛ ಶೌಚಾಲಯ ಸೌಲಭ್ಯಗಳನ್ನು ಖಾತರಿಪಡಿಸಿಕೊಳ್ಳುವುದು.






# ಗ್ರಾಮ ಪಂಚಾಯಿತಿಗಳ ಪಾತ್ರ

- ನೀರು ಮತ್ತು ನೈರ್ಮಲ್ಯ ಸ್ವತ್ತುಗಳ ಬಳಕೆ ಮತ್ತು ನಿರ್ವಹಣೆಯ ಪ್ರಮುಖ ಅಂಶಗಳ ಕುರಿತು ಎಲ್ಲಾ ಕುಟುಂಬಗಳಿಗೆ ಜಾಗೃತಿ ಮೂಡಿಸುವುದು.
- ಅಡುಗೆಗೆ, ಬಿಸಿಮಾಡಲು, ಬೆಳಕು, ನೀರಾವರಿ, ಗೃಹೋಪಯೋಗಿ ಆಹಾರ ಸಂಸ್ಕರಣೆ, ಕೈಗಾರಿಕೆಗಳು, ಅಂಗಡಿಗಳು ಮತ್ತು ಹೋಟೆಲ್‌ಗಳಂತಹ ವಾಣಿಜ್ಯ ಸಂಸ್ಥೆಗಳ ವಿವಿಧ ಅಗತ್ಯಗಳಿಗಾಗಿ ಬೇಕಾಗುವ ಇಂಧನ ಶಕ್ತಿಯನ್ನು ಗುರುತಿಸುವುದು.





# ಗ್ರಾಮ ಪಂಚಾಯಿತಿಗೆ ಯಾರೆಲ್ಲ ಬೆಂಬಲ ನೀಡಬಹುದು

- ನೀರು ಸರಬರಾಜು ಯೋಜನೆ ನಿರ್ವಾಹಕರು
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS) ಯ ನೋಂದಣಿದಾರರು
- ಆರೋಗ್ಯ ಕಾರ್ಯಕರ್ತೆಯರು / ಅಂಗನವಾಡಿ ಕಾರ್ಯಕರ್ತೆಯರು / ಇಲಾಖೆ ಅಧಿಕಾರಿಗಳು
- ಸ್ವಸಹಾಯ ಸಂಘಗಳು( SHGs) / ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು
- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (NRLM) ಸಮುದಾಯ ಸಂಪನ್ಮೂಲ ವ್ಯಕ್ತಿಗಳು
- ಗ್ರಾಮ ರೋಜ್‌ಗಾರ್ ಸೇವಕರು
- ಗ್ರಾಮ ಆರೋಗ್ಯ,ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ(VHSNC )ಸದಸ್ಯರು


ಸ್ವಾವಲಂಬಿ ಮೂಲಸೌಕರ್ಯ ವಿರುವ ಗ್ರಾಮ ಮತ್ತು ಜಿಪಿಡಿಪಿ
ಅಗತ್ಯಗಳ ಗುರುತಿಸುವಿಕೆ
ಮುಂಚೂಣಿ ಕಾರ್ಯಕರ್ತರು ಸಮುದಾಯದ ಭಾಗವಹಿಸುವಿಕೆ
ಜಾಗೃತಿ ಅಭಿಯಾನ
ಪ್ರಾರಂಭಿಕ ಚಟುವಟಿಕೆಗಳು
ಕಡಿಮೆ ವೆಚ್ಚ- ವೆಚ್ಚ ರಹಿತ
ಸಮಿತಿಗಳ ಬಲವರ್ಧನೆ
ಯೋಜನೆ ತಯಾರಿ ಮತ್ತು ಅನುಷ್ಠಾನ
ಪರಿವೀಕ್ಷಣೆ

# ಧನ್ಯವಾದಗಳು

